ಬೆಳಗಿನ ಜಾವವಿರಬೇಕು. ಸುತ್ತ ಇದ್ದ ಪೊದೆಗಳಿಂದ ಸಣ್ಣಪುಟ್ಟ ಹಕ್ಕಿಗಳು ನಾನಾರೀತಿಯಲ್ಲಿ ದನಿ ಎತ್ತಿದ್ದವು. ಅವೂ ತತ್ವ ಹಾಡುತ್ತಿವೆಯೇನೋ ಎನ್ನಿಸಿತು. ಭಯದಲ್ಲಿ ಅದ್ದಿ ಮುಳುಗಿದ್ದರೂ ಮನಸ್ಸೊಂದು ರೀತಿಯಲ್ಲಿ ತಣಿದು ತಣ್ಣಗಾಗಿತ್ತು. ಆ ಪುಟ್ಟ ಹಕ್ಕಿಗಳ ಚಿಲಿಪಿಲಿ ಹಿತವೆನ್ನಿಸಿತು. ಅವುಗಳ ಜೀವನೋತ್ಸಾಹ ತನಗೆ ಬರಬಾರದೆ ಎನ್ನಿಸಿತು. ಇವತ್ತಿನ ಬೆಳಗು ಎಂದಿನಂತಿರಲಿಲ್ಲ. ಅಷ್ಟುಹೊತ್ತಿಗೆ ಬೆಳಕು ಬರಲಾರಂಭಿಸಿ ಫೋಟೊದಲ್ಲಿದ್ದ ಅಜ್ಜಯ್ಯನ ನಗು ಕಾಣಲಾರಂಭಿಸಿತು.

ಮನೆಗೆ ಹೋಗಲು ಉತ್ಸಾಹವಿರಲಿಲ್ಲ. ಮತ್ತೆಲ್ಲಿಗೂ ಹೋಗಲಾರದ್ದಕ್ಕೆ ಮನೆ ಕಡೆ ಹೊರಟ. ಮನೆಗೆ ಹೋದರೆ ಸುತ್ತಿಕೊಳ್ಳುವ ಅವೇ ರ‍್ವಾತೆಗಳನ್ನು ನೆನೆಸಿಕೊಂಡು ಬೇಜಾರೆನ್ನಿಸಿತು. ಆದರೂ ನೋಡೇಬಿಡೋಣ ಏನೋ ಒಂದು ಮಾಡೋಣ ಎನ್ನುವ ಭರವಸೆ ಅದೆಲ್ಲಿಂದಲೋ ಮೂಡತೊಡಗಿತು. ಮನೆ ಹತ್ತಿರಕ್ಕೆ ಬಂದಂತೆ ಮನೆ ಮುಂದೆ ಶೆಟ್ಟಿಕೆರೆಯ ಭೈರಜ್ಜಿ ಏಕತಾರಿಯೊಡನೆ ಹಾಡುತ್ತ ಭಿಕ್ಷೆಗೆ ನಿಂತಿತ್ತು. ಭೈರಜ್ಜಿ ತುಂಬಾ ಅಪರೂಪಕ್ಕೆ ಹೀಗೆ ಭಿಕ್ಷೆಗೆ ಬರುತ್ತಿತ್ತು. 'ಮನೆ ಮನೆ ಎಲ್ಲೈತೋ ಮನೆ, ಹೋಗೋಮಟ ನಮ್ಮ ಗುರುಮನೆ... ನೀನೋಗೊಮಟ ನಮ್ಮ ಗುರುಮನೆ...' ತತ್ವಕ್ಕೆ ಏಕತಾರಿ ಝೇಂಕರಿಸುತ್ತಿತ್ತು. ಇವತ್ಯಾಕೋ ಅವಜ್ಜಿಯನ್ನು ಮಾತಾಡಿಸಬೇಕೆನಿಸಿತು. ಬಂದವನೆ ಜಗತಿ ಮೇಲೆ ಕೂತುಕೊಂಡು ಅವಜ್ಜಿ ಹಾಡಿದ ತತ್ವವನ್ನು ಇಡಿಯಾಗಿ ಕೇಳಿಸಿಕೊಂಡ. ಅಜ್ಜಿ ಇನ್ನೂ ಉಮೇದಿನಿಂದ ಹಾಡಿತು.

ಸಂಸಾರ ಮಾಡಲು ಬರೀ ಮನೆ ।
ಇದು ಸತ್ತಮೇಲೆ ಸುಡುಗಾಡು ಮನೆ
ಒಂದು ದೇಹಕ್ಕೊಂಬತ್ತು ಮನೆ
ಇದು ಪಾಳುಗೆಟ್ಟ ಪರಿಣಾಮ ಮನೆ
ಬಣ್ಣಗೆಟ್ಟ ಬಂಡಾಟ ಮನೆ ಇದು
ತಿಂದು ಕೆಡಿಸಿದ ಸಿಟ್ಟು ಮನೆ ॥
ಆತ್ಮದೊಳಗೆ ಒಂದು ಜ್ಞಾನ ಮನೆ
ಇದು ಅರಸಪ್ರಧಾನಿಯ ಸರಸಮನೆ
ಬುದ್ಧಿವಂತರು ಪಗಡೆಯನಾಡಲು
ಪಂಚದೀಪ ಪ್ರದಾನ ಮನೆ ॥

ಭೈರಜ್ಜಿ ಹಾಡುತ್ತಲೇ ಇತ್ತು. ಎಂದೂ ಈವಜ್ಜಿಯನ್ನು ಇಷ್ಟು ಸಮಾಧಾನವಾಗಿ ಕೇಳಿಸಿಕೊಂಡಿರಲಿಲ್ಲ. ಅಷ್ಟರಲ್ಲಿ ಹಿರಿಸೊಸೆ ಒಂದು ಮುರುಕು ರೊಟ್ಟಿ ಮೇಲೆ ಒಂದಿಷ್ಟು ಚಟ್ನಿ ಹಾಕಿಕೊಂಡು ಅಜ್ಜಿಗೆ ಕೊಡಲು ಬಂತು. ಜಗತಿ ಮೇಲೆ ಮಾವಯ್ಯ ಕುಳಿತಿರುವುದನ್ನು ಕಂಡು ಅತ್ತೆಗೆ ಹೇಳಲು ಮತ್ತೆ ಹಂಗೇ ಒಳಗೆ ಹೋತು. ಗುರುಸ್ವಾಮಿಗೆ ಭೈರಜ್ಜಿಯ ಜೊತೆ ಮಾತಾಡಬೇಕೆನಿಸಿತು. ಅಷ್ಟರಲ್ಲಿ ಹೊರಗೆ ಬಂದ ಹೆಂಡತಿಯನ್ನು 'ಈ ಅಜ್ಜೀನ ಒಳಗೆ ಕರೆದು ರೊಟ್ಟಿಕೊಡು. ತಿನ್ನಲಿ' ಎಂದಷ್ಟೇ ಹೇಳಿ ಬಚ್ಚಲಕಡೆಗೆ ಹೋದ. ನಿನ್ನೆ ನಡೆದ ಮಾಮೇರಿ ಸಂಗತಿಗಳಿಂದಾಗಿ ಹೆಂಡತಿ ಗಂಗಮಾಳಮ್ಮನಿಗೆ ಗಂಡನ ಜೊತೆ ಏನು ಮಾತಾಡಲೂ ತೋಚಲಿಲ್ಲ. ರಾತ್ರಿ ಎಲ್ಲಿಗೋಗಿದ್ದೆ ಯಾಕೆ ಬರಲಿಲ್ಲ ಅಂತಾ ಕೇಳಲೂ ಆಗಲಿಲ್ಲ. 'ಬಾರಜ್ಜಿ ರೊಟ್ಟಿ ತಿನ್ನು ಬಾ' ಎಂದು ಅಜ್ಜೀನ ಕರೆದು ಒಳಗೆ ರೊಟ್ಟಿ ತರಲು ಹೋದಳು.

ಕೈಕಾಲು ತೊಳೆದು ಮಕಾ ಒರೆಸಿಕೊಳ್ಳುತ್ತ ಬಂದ ಗುರುಸ್ವಾಮಿ, 'ನನಗೂ ರೊಟ್ಟಿ ತಾರಮ್ಮಿ' ಎಂದು ಹೆಂಡತಿಗೆ ಕೂಗಿ ಹೇಳಿ ಭೈರಜ್ಜಿಯ ಮುಂದೆ ಕೂತ. ಯಾಕಪ್ಪ ಎಲ್ಲಿಗೋಗಿದ್ದೆ? ಎಂದು ಅಜ್ಜಿ ಕೇಳಿತು. 'ಅಜ್ಜಯ್ಯನ ಗದ್ದಿಗೆಗೆ ಹೋಗಿದ್ದೆ' ಎಂದದ್ದಕ್ಕೆ 'ಗುರು ದೊಡ್ಡವನು ಕಣಪ್ಪಾ' ಎಂದು ಅಜ್ಜಿ ರೊಟ್ಟಿ ತಿಂದು ಮುಗಿಸಿ ಮೇಲೆದ್ದಿತು. ಅಷ್ಟರಲ್ಲಿ ಗುರುಸ್ವಾಮಿ, 'ಅಜ್ಜಿ ಈಗ ಹಾಡಿದಲ್ಲ ಅದನ್ನು ಏನಂತಾರೋ ಗೊತ್ತಿಲ್ಲ. ಅದೇನು? ಅದರ ಅಂತರಾರ್ಥ ಏನು?' ಅಂದ. 'ಅಯ್ಯೋ ಅದು ಗುರುಕಟ್ಟಿಕೊಟ್ಟ ಬುತ್ತಿ ಕಣಪ್ಪ, ಉಣ್ಣೋರು ಮಾತ್ರ ಬಿಚ್ಚೋ ಗಂಟು. ಇರ್ಲಿ ತಗಾ ಎಂದಾದರೂ ನಿಂಗೂ ಸಿಕ್ತದೆ' ಅಂದು ಏಕತಾರಿ ತಗಂಡು ಹೊರಟೇಬಿಡ್ತು. ಗುರುಸ್ವಾಮಿ ಮತ್ತೊಂದು ರೊಟ್ಟಿ ಮುರಿಯೋ ಹೊತ್ತಿಗೆ ಮತ್ಯಾರದೋ ಮನೆ ಮುಂದೆ – ಮನೇ ಮನೇ ಎಲ್ಲೈತೋ ಮನೆ – ಕೇಳಿಸುತ್ತಿತ್ತು.

ಮನೇಲಿ ನಡೆದ ನಿನ್ನೆಯ ಘಟನೆಗಳಿಗೆ ಈ ಹಾಡು ಅದ್ಯಾಕೋ ತಾಳ ಹಾಕುವಂತಿತ್ತು. ಅವೆಲ್ಲ ನಿನ್ನೆ ಮಾತ್ರ ನಡೆದ ಸಂಗತಿಗಳಾಗಿರಲಿಲ್ಲ. ಒಂದೊಂದೇ ತೊಟ್ಟು ನೀರು ಹನಿಕೀ ಹನಿಕೀ ತುಂಬಿದ ಬಟ್ಟಲಿನಂತಾಗಿತ್ತು. ಒಂದೊಂದೇ ನೆಪ್ಪಿಗೆ ಬಂದವು. ನಿನ್ನೆ ಬೆಳಗ್ಗೆ ಹೊರಜಗಲಿಯ ಮೇಲೆ ಕಾಫಿ ಕುಡಿಯುತ್ತ ಕೂತಿದ್ದ